Regd No M 1299 Sri ತಾ|| 17—10—51

SATYAVADI = 35th Year

ಸತ್ಯವಾದಿ

ಸಂಪಾದಕರು- ಆರಮನೆ ಸಿರಸ್ತೆದಾರ್ ಎಂ. ವಿ. ಸುಬ್ರಾಯರು [ಬಿಡಿ ಪ್ರತಿ 3 ಪೈ

ಪ್ರಧಾನಿ ಲಿಯಾಕತ್‌ರ ಸಾವು

ನಿನ್ನೆ ಮಧ್ಯಾಹ್ನ ರಾವಲ್ಪಿಂಡಿಯಲ್ಲಿ ಮುಸ್ಲಿಂಲೀಗಿನ ಸಭೆಯಲ್ಲಿ ಭಾಷಣ ಮಾಡುತ್ತಿದ್ದಾಗ ಪಾಕ್ ಪ್ರಧಾನಿ ಗುಂಡಿನೇಟು ಬಿದ್ದು ಸಾವಿಗೀಡಾದರು.

ವಾರ್ತೆಗಳು

ಅಕ್ಟೋಬರ್ 15 ನೇ ತಾ|| ಗುಜರಾತಿನಲ್ಲಿ ಹೊಸ ರಾಜಕೀಯ ಪಕ್ಷ ಪ್ರಜಾಪಕ್ಷ ಉದಯವಾಯಿತು ಎಂದು ಅಹಮದಾಬಾದ್ ವಾರ್ತೆ.

ಸಿಂಧ್ ಸರ್ಕಾರ ಹನ್ನೊಂದು ವರ್ಷಕ್ಕೆ ವಿಧಿಸಿದವರಿಗೆ ಕಡ್ಡಾಯ ಸೇನಾ ಶಿಕ್ಷಣ ಕೊಡಲು ತೀರ್ಮಾನ ಮಾಡಿರುವುದಾಗಿ ಕರಾಚಿ ವಾರ್ತೆ.

ಸೇನಿಕರು ದಂಗೆ ಮಾಡಿದ ಪಕ್ಷದಲ್ಲಿ ಫಾಸಿ ವಿಧಾಯಕ ಮಾಡುವ ಶಾಸನವನ್ನು ಅರ್ಜಂಟೈನಾ ಶಾಸನ ಮಂಡಲಿ ಅಂಗೀಕರಿಸಿದೆ

ಇದೇ ತಾ|| 26 ರಂದು ನವದೆಹಲಿಯಲ್ಲಿ ಶ್ರೀ ಜಯಪ್ರಕಾಶ್ – ಸಚಿವ ಶ್ರೀ ಅಯ್ಯಂಗಾರ್ ಕಲೆತು ರೈಲ್ವೆಯವರ ಬೇಡಿಕೆಯನ್ನು ಪರಿಶೀಲಿಸುವರು.

ಭತ್ತವನ್ನು ಕಳ್ಳಪೇಟೆಯಲ್ಲಿ ಅನೇಕ ಬಾರಿ ವಿಕ್ರಯ ಮಾಡಿದ ಆರೋಪದ ಮೇಲೆ ಗೋದಾವರಿ ಜಿಲ್ಲೆಯ ಕೆಸಂತಾಂತ ಜಮೀಂದಾರರಾದ ವೇಗುಂಟ ವುಲ್ಲಯ್ಯ ಎಂಬವರನ್ನು ಸ್ಥಾನಬದ್ಧತೆಯಲ್ಲಿಡಲು ಜಿಲ್ಲಾ ಮ್ಯಾಜಿಸ್ಟ್ರೇಟರು ಆಜ್ಞೆ ಮಾಡಿದ್ದಾರೆಂದು ಏಲೂರು ವಾರ್ತೆ

ಕಾಶ್ಮೀರ ಬಗೆಗೆ ಡಾ|| ಗ್ರಹಾಂ ಇತ್ತಿರುವ ವರದಿಯ ಮೇಲೆ ವಿಶ್ವ ಸಂಸ್ಥೆಯಲ್ಲಿ ನಾಳೆ ಪರಿಶೀಲಿಸಲಾಗುವುದು.

ಮುಂದಿನ ವರ್ಷ ವೇ- ತಿಂಗಳಿನ ವರಿಗೆ ಸುಪ್ರೀಂ ಕೋರ್ಟು ಜಡ್ಜರನ್ನಾಗಿ ಶ್ರೀ ಫಜಲ್ ಅಲಿಯವರನ್ನು ನೇಮಕ ಮಾಡಲಾಗಿದೆ ಒಂದು ತಿಂಗಳಿನ ಹಿಂದೆ ಇವರು ನಿವೃತ್ತರಾಗಿದ್ದರು

ಶೃಂಗೇರಿ ಜಹಗೀರಿಯನ್ನು ಉಳಿಸಲು ಸಾಧ್ಯವಾದ ಸಹಾಯ ಮಾಡುವುದಾಗಿ ಮೈಸೂರು ರಾಜರು ನಿನ್ನೆ ತಮ್ಮ ಸಂದರ್ಶನ ಪಡೆದ ಬೊಂಬಾಯಿನ ಶೃಂಗೇರಿ ಕ್ಷೇತ್ರಾ ಸಮಿತಿ ನಿಯೋಗಕ್ಕೆ ತಿಳಿಸಿದರೆಂದು ವಂದಿಯಾಗಿದೆ.

ಉತ್ತರ ಕೆರೋಲಿನದ ವಿಸ್ಟಕ ಸಲೆಂನಲ್ಲಿ ಅಧ್ಯಕ್ಷ ಟ್ರೂಮನ್ನರು ಮನ್ನಿಭಾಷಣ ಮಾಡುತ್ತಾ ಅಮೇರಿಕಕ್ಕೆ ಸಮರಬೇಡ ಶಾಂತಿಬೇಕು ಎಂದಿರುವರು.

ಮೈಸೂರಿನಲ್ಲಿ ನಡೆಯುವ ವಿಹಾಚುನಾವಣೆಗೆ ಉಮೇದುವಾರಿಕೆ ಅರ್ಜಿ ಸಲ್ಲಿಸಲು ಕೊನೆ ತಾ|| ನವೆಂಬರ್ 21.

ಮೊನ್ನೆ ದಿವಸ ಚಿಕ್ಕಮಗಳೂರಿನಲ್ಲಿ ಮುಲಬಾರಿ ವ್ಯಾಪಾರಿ ಕುಂಜಿಅಹಮ್ಮದ್ ಎಂಬವನನ್ನು ಒಂದಿಸಲು ಪೋಲೀಸರು ಅವನಲ್ಲಿಗೆ ತೆರಳಿದಾಗ ಮುಚ್ಚಿದ ಬಾಗಿಲು ತೆರೆದು ಕೊನೆಗೆ ಅವನನ್ನು ಬಂಧಿಸಲಾಯಿತೆಂದೂ ವರದಿ ಬಂದಿದೆ.

ಸ್ವಾತಂತ್ರ ತಂದ ಶ್ರೇಯಸ್ಸು ಕಾಂಗ್ರೆಸಿಗರಲ್ಲ

ಅಖಿಲ ಭಾರತ ಹಿಂದೂಮಹಾಸಭೆಯ ಅಧ್ಯಕ್ಷರಾದ ಡಾ|| ಎಸ್. ಬಿ. ಮುಖರ್ಜಿ ಯವರು ಪದ್ಮರಾ ಜಿಲ್ಲಾ ಹಿಂದೂಮಹಾಸಭಾ ಪರಿಷತ್ತಿನ ಅಧ್ಯಕ್ಷ ಸ್ಥಾನದಿಂದ ಮಾತಾಡುತ್ತಾ ಕಾಂಗ್ರೆಸ್ ದೇಶಕ್ಕೆ ಸ್ವಾತಂತ್ರ್ಯವನ್ನು ತಂದಿದೆಯೆಂಬುದು ಕಟ್ಟುಕತೆಯೆಂದೂ ಜಾಗತಿಕ ಪರಿಸ್ಥಿತಿಯು ಮೂಲಕ ಬ್ರಿಟಿಷರೇ ಅಧಿಕಾರವನ್ನು ಹಸ್ತಾಂತರ ಮಾಡಲು ನಿರ್ಧರಿಸಿದರೆಂದೂ ತಿಳಿಸಿದರು.

ಮಲ್ಲನ ಮಾತು

ಈಗಲೀಗ ಸ್ವತಂತ್ರರು !

ಸ್ವಾತಂತ್ರ್ಯ ಸಿಕ್ಕಿ ನಾಲ್ಕು ವರ್ಷ ಕಳೆದು ಹೋಯಿತು ನಮ್ಮ ಸ್ವತಂತ್ರರಾಗಿದ್ದೇವೆ ? ಎಂದು ಜನ ಅಂದ್ಕೋತ ಇದ್ದಾರೆ. ನಮ್ಮ ಸರಕಾರದವರು ಏನೇ ಮಾಡ್ತಾರೆ ಅನ್ನೋದು ಜನಗೋಳ್ಗೆ ತೀರೋದು : ನೋಡಿ ಈಗ ಹೊಸ್ತಾಗಿ ಒಂದು ಕಾನೂನು ಮಾಡಿದ್ದಾರೆ ; ಬಹಳ ಚೆನ್ನಾಗಿದೆ.

ಇನ್ನೇನಿಲ್ಲಾ ದೇವ್ರು, ಇಷ್ಟು ದಿನ ಹೆಂಗಸ್ರು ಗಂಡಸ್ರುಗೆಅಧೀನಾಗಿ ಬಾಳ್ಬೇಕಿತ್ತು ; ಯಾವಾಗಲೋ ಯಾರ ಸ್ನೋ ಮದುವೆಯಾಗಿರೋ ಗಂಡನ್ನ ಕೊನೆವರೆಗೂ ಅವನಸ್ನೇ ಕಟ್ಕೊಂಡು ನರಳಬೇಕಿತ್ತು ; ಅವನು ಬದುಕ್ಕೊಂಡಿರುವಾಗಲಂತೂ ಅವನೇ ಗಂಡ ; ಆ ಗಂಡ ಅವನ್ಹಾಡಿಗೆ ಅವನು ಸತ್ತೋದ್ಮೇಲೆ ಹೆಂಗಸ್ರು ಇನ್ನೊಬ್ರ ಮುಖ ಸಹ ನೋಡೋಹಾಗಿರ್ಲಿಲ್ಲ ; ಇದೇನಾದ್ರಾನ್ಯಾಯ ಅನ್ಯಾಯ ?

ಈಗ್ನೋಡಿ, ಎಲ್ಲಾ ಸ್ವತಂತ್ರರು ; ಗಂಡ ಸತ್ತರೂ ಬೇರೆ ಮದುವೆಯಾಗಬಹುದು; ನೀವ್ಬೇಡ ಅಂದ್ರೆಟ್ರೆ ಆಯ್ತು ; ಹೆಂಗಸ್ರು ಮಾತ್ರವಲ್ಲ ಗಂಡಸ್ರೂ ಅಷ್ಟೇ ; ಆ ಹಳೇ ಕಂದಾಚಾರವೆಲ್ಲಾ ಹೋಯ್ತು ; ಈಗ ಎಲ್ಲಾ ಹೊಸ ಕಾಲ; ನಾವು ಸ್ವತಂತ್ರರು.

ಏನೇ ಆದರೂ ಕಷ್ಟಕಳದೋಯ್ತು; ಇನ್ಮುಂದೆ ದಿನಾ ಬೇಕಾದರೂ ಹೊಸ ಗಂಡನ್ಮಾಡ್ಕೋಬಹುದು, ಹೊಸ ಹೆಂಡ್ತೀನ್ಮಾಡ್ಕೋಬಹುದು ; ದಿನವೂ ಬೇರೆ ಬೇರೆ ಅಡಿಗೆ ಮಾಡೋಲ್ವೇ ಹಾಗೆ.

ಇಷ್ಟು ದಿನ ಇಲ್ದೇಇದ್ದ ಸ್ವಾತಂತ್ರ್ಯ ಈಗ ನಮಗೆಲ್ಲಾ ಸಿಕ್ಲಿಲ್ವೇ ? ಅದ್ರಿಂದ್ಲೇ ನಾವು ಈಗ ಸ್ವತಂತ್ರರು !

'ಮಲ್ಲ'

ದಿವ್ಯವಾಣಿ

ಭೂಮಿಯಲ್ಲೇ ಒಳ್ಳೇನಾಡು – ನಮ್ಮ ಭಾರತ ನಾಡು

— ತಮಿಳು ಕವಿ ಭಾರತಿ.

—ದಸರಾ ವಸ್ತುಪ್ರದರ್ಶನದ ಫ್ಯಾನ್ಸಿ ಡ್ರೆಸ್ ಸ್ಪರ್ಧೆಯಲ್ಲಿ ವಿನ್ನರ್ ಆದವರಿಗೆ ಚನ್ನಾಗಿರುವ ಬೆಳ್ಳಿಕಪ್‌ನ್ನು ರೋಲಿಂಗ್ ಕಪ್ ಆಗಿ ಕೊಡಲು ಶ್ರೀ ಕೆ ಮೋಟಾರ್ ಸರ್ವಿಸ್ ಮಾಲೀಕರು ಕೊಟ್ಟಿದ್ದಾರೆಂದು ವಸ್ತು ಪ್ರದರ್ಶನದ ಕಾರ್ಯದರ್ಶಿಗಳು ತಿಳಿಸುವರು.

—ಭದ್ರಾವತಿಯಲ್ಲಿ ಗೋವಧೆ ಮಾಡಿದ ಆರು ಮಂದಿ ಬಂಧಿಸಲ್ಪಟ್ಟರು.

—ನವದೆಹಲಿಯಲ್ಲಿ ನಿನ್ನೆ ಸೇರಿದ್ದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ವಿನಾಶಕಾರಕ ಮತ್ತು ಸಮಾಜಘಾತುಕ ಮನೋಭಾವನೆಯನ್ನು ಖಂಡಿಸಿತು.

—ಸಧ್ಯದಲ್ಲಿಯೇ ಭಾರತ ಸರ್ಕಾರ ಬೇಂಕ್ ನಾಕರರ ವಿವಾದ ಪರಿಹಾರಕ್ಕೆ ನೂತನ ಪಂಚಾಯತಿ ನೇಮಕ ಮಾಡಲಿದೆಯೆಂದು ದೆಹಲಿ ವಾರ್ತೆ.

ಹೈದರಾಬಾದಿನ ಸರ್ಕಾರ 4 ವರೆ ಸಹಸ್ರ ರೂ. ಖರ್ಚು ಮಾಡಿ ಒಂದು ಯಂತ್ರವನ್ನು ತರಿಸಿದೆ. ಸಗಣಿ ಇತ್ಯಾದಿ ಹೇಸಿಗೆಗಳಿಂದ ಅನಿಲ ತಯಾರಿಸಿ ಅದರಿಂದ 20 ಬೀದಿ ದೀಪ ಹಚ್ಚಿಸಬಹುದು.

ಕೊಚ್ಚಿನ್ – ತಿರುವಾಂಕೂರು ಡೆಮೊಕ್ರಾಟಿಕ್ ಕಾಂಗ್ರೆಸಿನ ವಿಸರ್ಜನೆಯಾಯಿತೆಂದು ಕ್ವಿಲಾನಿನ ವಾರ್ತೆ.

ಪರ್ಷಿಯದ ಎಣ್ಣೆ ತಂಟೆಯನ್ನು ಬ್ರಿಟಿಷ್ ಸಂಯುಕ್ತ ರಾಷ್ಟ್ರ ಸಂಸ್ಥೆಗೆ ಒಯ್ದು ದೊಡ್ಡ ತಪ್ಪು ಮಾಡಿತೆಂದು ಡಾ|| ಹೆನ್ರಿಗ್ರೇಡಿಯವರು ಅಭಿಪ್ರಾಯಪಟ್ಟರು ಎಂದು ವಾಷಿಂಗ್ಟನ್ ವಾರ್ತೆ ತಿಳಿಸುತ್ತದೆ.

ಮೈಸೂರು ವರ್ತಮಾನ

ಮೈಸೂರು ಪೌರಸಭೆ ವಿಶೇಷಾಧಿವೇಶನ

ಇದೇ ಮಾಹೆ ತಾ|| 19 ನೇ ಶುಕ್ರವಾರ ಮಧ್ಯಾಹ್ನ 4 ಗಂಟೆಗೆ ಮೈಸೂರು ಪೌರಸಭೆಯು ವಿಶೇಷ ಅಧಿವೇಶನ ಸಮಾವೇಶವಾಗುವದು.

ಉಮೇದುವಾರರಿಗೆ ಟೆಲಿಫೋನ್ ಸೌಕರ್ಯ

ಒಂಬಿರುವ ಚುನಾವಣೆಯಲ್ಲಿ ಸ್ಪರ್ಧಿಸುವ ಉಮೇದುವಾರರಿಗೆ ಮತ್ತು ಪಕ್ಷಗಳಿಗೆ ತುಂಗಾವಿ ಟೆಲಿಫೋನ್ ಸೌಕರ್ಯ ವತ್ತು ಕೆಲವು ವಿಶೇಷ ಟಪ್ಪಾಲು ಸೌಕರ್ಯಗಳು ಟಪ್ಪಾಲು ಮತ್ತು ತಂತಿ ಇಲಾಖೆ ಕಡೆಯಿಂದ ದೊರೆಯುವುವು.

ಲಂಡನ್ನಿನಲ್ಲಿ ರತ್ನ ಪ್ರದರ್ಶನ

ಲಂಡನ್ನಿನಲ್ಲಿ ರತ್ನ ಪ್ರದರ್ಶನದ ಏರ್ಪಾಟಾಗಿದೆ. ಪ್ರಪಂಚದ ಎಲ್ಲಿ ಕಡೆಗಳಿಂದಲೂ ಬಂದಿರುವ ಶ್ರೇಷ್ಠ ನವರತ್ನಗಳನ್ನು ಇಡಲಾಗಿದೆ. ಇದು ಯುದ್ಧಾನಂತರ 3 ನೇ ರತ್ನಪಡಿ ಪ್ರದರ್ಶನ.

ಪರೀಕ್ಷೆಗೆ ಹೋಗಲಿಲ್ಲ

ಸರ್ಕಾರಿ ಪರೀಕ್ಷೆಗಳ ಸಂಬಂಧದಲ್ಲಿ ಹಾಲ ಟಿಕೀಟುಗಳು ಬಂದಿದ್ದರಿಂದ ಪರೀಕ್ಷೆಗೆ ಕೂಡಬೇಕಾಗಿದ್ದ ನೂರೈವತ್ತು ವಿದ್ಯಾರ್ಥಿಗಳು ತಿಪ್ಪಗಾರಬೇಕಾಯಿತೆಂದು ಪಾಲಘಾಟ್ ವಾರ್ತೆ

ಹಿಂದೂಕೋಡು ಬೆಂಬಲಿಗರಿಗೆ ಮತಹಾಕದಿರಿ

ಜಬ್ಬಲಪುರದಲ್ಲಿ ಹೊಸ್ತೆ ಮೊಸ್ತೆ ಮಧ್ಯ ಪ್ರದೇಶದ ಮಾಜಿ ಗೃಹಸಚಿವ ಶ್ರೀ ಮಿಶ್ರರವರು ಭಾಷಣ ಮಾಡುತ್ತಾ ಹಿಂದೂ ಧರ್ಮಶಾಸ್ತ್ರ ಕೋಡಿಕರಣ ಮಸೂದೆಯ ಬೆಂಬಲಿಗರಿಗೆ ಮಹಾ ಚುನಾವಣೆಯಲ್ಲಿ ಮತಹಾಕದಿರೆಂದು ಏನಂತಿಸಿದರು ಹಿಂದೂಕೋಡಿನಿಂದ ಕಾಂಗ್ರೆಸಿಗೆ ಅಹಿತವಾಗುವದೆಂದು ಪಂ. ನೆಹರುವಿಗೆ ಹೇಳಲು ಬಿಡು ಸಿಲ್ಲಿಸಲ್ಪಟ್ಟಿತು ಎಂದವರು ತಿಳಿಸಿದರು.



ಶಾಕ್‌ಫೆಲ್ಲರ್ ಕೇಂದ್ರ. 15 ಕಟ್ಟಡಗಳು. ನ್ಯೂಯಾರ್ಕ್ ನಗರದಲ್ಲಿ ಸುಮಾರು ಎಕರೆ ಪ್ರದೇಶದಲ್ಲಿ ಹರಡಿರುವ

ಅಪೇರ— ರಣಜಿತ್

ಅಮೋಘ 3 ನೇ ವಾರ ಕೀರ್ತಿಯುತ 3 ನೇ ವಾರ

ಸರ್ವಾಧಿಕಾರಿ ಶಬಿಸ್ತಾನ್

ಮಹೋನ್ನತ ತಮಿಳು ಚಿತ್ರ ಮನಮೋಹನ ಹಿಂದಿ ಚಿತ್ರ

ಪಾತ್ರ — ಅಂಜಲಿದೇವಿ, ನಾಗಯ್ಯ, ರಾಮಚಂದ್ರ್, ಸಂಬಯ್ಯಾರ್ ಪಾತ್ರ: ಶಾಂ, ಸಸೀಂ, ಸಪ್ರೂ, ಕಕ್ಕೂ

ಪ್ರತಿ ದಿನ 3 ಆಟಗಳು ಪ್ರತಿ ದಿನ 3 ಆಟಗಳು

ಬೆಳಗಿನ ಪ್ರದರ್ಶನ 19-10-51 ರಿಂದ

ಸಿಂಗಾರ್ (ಹಿಂದಿ)

ಸತ್ಯವಾದಿ

ದಿನಪತ್ರಿಕೆ ತಿಂಗಳಿಗೆ 6 ಆಣೆಗಳು

ಈಗ ಯಶಸ್ವಿಯಾಗಿ ನಡೆಯುತ್ತಿದೆ — ಪ್ರತಿ ದಿನ 3 ಆಟಗಳು

ಚಾಮುಂಡೇಶ್ವರಿ ಮತ್ತು ಗಣೇಶ ಟಾಕೀಸುಗಳಲ್ಲಿ

ಸುಖಸಂಪತ್ ಚಿತ್ರಪಥದವರ ಸುಂದರ ಪೌರಾಣಿಕ ಚಿತ್ರ

ತಿಲೋತ್ತಮೆ (ಕನ್ನಡ)

ಭೂಮಿಕೆ— ಜಯಶ್ರೀ, ಜಿ. ಆರ್. ಸ್ವಾಮಿಯವರ, ಕಲಾವಿಶಾರದ ಕೊಟ್ಟೂರಪ್ಪ

— SUKH SAMPATH CHITRAPAT Release

ಉಡ್‌ಲಾಂಡ್

ಜನಪ್ರಿಯ 2 ನೇ ವಾರ

ಪ್ರತಿ ಸಂಸಾರವೂ ನೋಡಲೇಬೇಕಾದ

ಅಮೋಘ ಪೌರಾಣಿಕ ಹಿಂದಿ ಚಿತ್ರ

ಶ್ರೀ ಗಣೇಶ ಜನ್ಮ

ಸೂಪರ್ ರಾಯಲ್, ತ್ರಿಲೋಕ್ ಕಪೂರ್

ಪ್ರತಿ ದಿನ 3 ಪ್ರದರ್ಶನಗಳು



Protect the Cow

Edited, Printed and Published by Dharma Prachara Niranjana M. S. Krishna Rao at the Satvavadi Press Chamarajapuram Mysore